

# ಅನ್ಯನಾಗುವ ಸಂಕಟ

'I didn't feel fully Chinese, or fully American – I just felt lost' (ನಾನು ಪೂರ್ತಿ ಚೀನೀಯಳು ಎಂದು ನನಗನಿಸಿಲ್ಲ, ಅಥವಾ ಪೂರ್ತಿ ಅಮೆರಿಕನ್ನಳು ಎಂದೂ ಅನಿಸಿಲ್ಲ – ನಾನು ಕಳೆದುಹೋಗಿದ್ದೇನೆ ಎನಿಸುತ್ತಿದೆಯಷ್ಟೆ).

ಹೀಗೆ ಹೇಳಿದ ಎರಿಕಾ ಎಂಗ್, ಚೀನಾದಿಂದ ಅಮೆರಿಕಕ್ಕೆ ಬಂದು ವಾಸಿಸುತ್ತಿರುವ ಕುಟುಂಬದ ಐದನೇ ತಲೆಮಾರಿನವಳು! ಈ ಮಾತು ಅವಳ ವೈಯಕ್ತಿಕ ಅನುಭವವಷ್ಟೇ ಅಲ್ಲ, ಅವಳು ನಿರ್ದೇಶಿಸಿರುವ 'ಅಮೆರಿಕನೈಸ್ಡ್' ಎಂಬ ಕಿರುಚಿತ್ರದ ಆತ್ಮವನ್ನೂ ಧ್ವನಿಸುವಂತಿದೆ. ಅವಳೇ ಹೇಳಿಕೊಂಡಿರುವ ಹಾಗೆ ಈ ಕಿರುಚಿತ್ರದ ನಾಯಕಿಯ ಪಾತ್ರ ಅವಳು ವೈಯಕ್ತಿಕ ಬದುಕಿನಲ್ಲಿ ಅನುಭವಿಸಿದ ಪಾಡಿನ ಪ್ರತಿಬಿಂಬವೇ ಆಗಿದೆ. ಹಾಗಾಗಿಯೇ ಇರಬೇಕು ಈ ಕಿರುಚಿತ್ರದ ನಾಯಕಿಯ ಹೆಸರೂ ಎಂಗ್.

ಎಂಗ್ ಮುಖ ನೋಡಿದರೇ ಗೊತ್ತಾಗುತ್ತದೆ ಅವಳು ಚೀನಾ ಮೂಲದವಳು ಎಂಬುದು. ಆದರೆ ಅವಳ ಅಭಿರುಚಿಗಳು ಮಾತ್ರ ಅಮೆರಿಕನ್ ಆಗಿವೆ. ಹಿಪಾಪ್ ಸಂಸ್ಕೃತಿಯನ್ನು ಅಪ್ಪಿ ಬೆಳೆದ ತಲೆಮಾರಿನ ಭಾಗ ಅವಳು. ಅವಳ ಹೇರ್‌ಸ್ಟೈಲ್ ಆಫ್ರಿಕನ್ನರನ್ನು ನೆನಪಿಸುವ ಹಾಗಿದೆ. ಅವಳು ಕೇಳುವ ಸಂಗೀತ ಅಮೆರಿಕನ್ ಟ್ರೆಂಡ್ ಸೂಚಿಸುತ್ತದೆ. ಹಾಗಾದರೆ ಎಂಗ್ 'ಅಮೆರಿಕನೈಜ್ಡ್' ಆಗಿಬಿಟ್ಟಿದ್ದಾಳೆಯೇ? ಇದೇ ಪ್ರಶ್ನೆಯನ್ನು ಹಲವು ಆಯಾಮಗಳಲ್ಲಿ ಈ ಕಿರುಚಿತ್ರ ಕೇಳುತ್ತ ಹೋಗುತ್ತದೆ.

ಶಾಲೆಯ ಬ್ಯಾಸ್ಕೆಟ್‌ಬಾಲ್ ಟೀಮ್‌ನಲ್ಲಿ ಇರುವವರ ಪಾಲಿಗೆ ಎಂಗ್ ಚೀನಿ, ಅವಳಿನ್ನೂ ಅಮೆರಿಕನ್ನಳಾಗಿಲ್ಲ. ಅದೇ ಏಷ್ಯಾ ಮೂಲದ ಇತರ ವಿದ್ಯಾರ್ಥಿಗಳ ಪಾಲಿಗೆ ಅವಳು ಏಷ್ಯನ್ನಳಾಗಿ ಉಳಿದಿಲ್ಲ, ಅತಿಯಾಗಿ ಅಮೆರಿಕನ್ ಸಂಸ್ಕೃತಿಗೆ ಒಗ್ಗಿಹೋಗಿದ್ದಾಳೆ. ಈ ಎರಡು ಜಗತ್ತಿನ ನಡುವೆ ಎಂಗ್ ಪ್ರತಿದಿನ ಪ್ರತಿ ಕ್ಷಣದಲ್ಲಿಯೂ ಒದ್ದಾಡುತ್ತಾಳೆ. ಅವಳ ಪ್ರತಿಭೆ, ಸಾಧನೆ, ಆಸೆ, ಹಂಬಲ, ಮಾತು ಎಲ್ಲವೂ ಆ ಎರಡು ಪ್ರಪಂಚಗಳ ನಡುವಿನ ಘರ್ಷಣೆಯಲ್ಲಿ ಕಳೆದುಹೋಗುತ್ತದೆ. ಅವಳು ಬ್ಯಾಸ್ಕೆಟ್‌ಬಾಲ್‌ನಲ್ಲಿ ಚೆಂಡನ್ನು ಬುಟ್ಟಿಯಲ್ಲಿ ಹಾಕಿದಳು ಎಂಬ ಸಾಧನೆ ಕೂಡ ಅವಳ ಸಹ ಆಟಗಾರ್ತಿಯ ಅಸೂಯೆಗೆ ಕಾರಣವಾಗುತ್ತದೆ. ಅವಳು ಚೀನಿ ಹುಡುಗನ ಜೊತೆಗೆ ಒಡನಾಡಿದರೆ ಅದು ಉಳಿದ ಚೀನಿ ವಿದ್ಯಾರ್ಥಿಗಳ ಅಪಹಾಸ್ಯಕ್ಕೆ ಕಾರಣವಾಗುತ್ತದೆ. ಈ ದ್ವಂದ್ವದಲ್ಲಿ ಎಲ್ಲಿಯೂ ಸಲ್ಲದೆ ತಳಮಳಿಸುವ ಹರೆಯದ ಹುಡುಗಿಯ ಮನಸ್ಸಿನ ತಾಕಲಾಟಗಳನ್ನು ಈ ಕಿರುಚಿತ್ರ ತುಂಬ ಸಶಕ್ತವಾಗಿ ಹೇಳುತ್ತದೆ.

ವೈಯಕ್ತಿಕ ಅನುಭವದ ನೆಲೆಯಲ್ಲೇ ರೂಪುಗೊಂಡರೂ ಅದನ್ನು ಮೀರಿ ಸಾರ್ವತ್ರಿಕಗೊಳ್ಳುವ ಶಕ್ತಿಯನ್ನು ಈ ಕಿರುಚಿತ್ರ ಗಳಿಸಿಕೊಂಡಿದೆ. 'ಅನ್ಯ'ಗೊಳಿಸುವ ಪ್ರಕ್ರಿಯೆ ಮತ್ತು 'ಅನಾಥ'ಭಾವ ಈ ಎರಡೂ ಬಹುಶಃ ಈ ಶತಮಾನದಲ್ಲಿ ಜಗತ್ತಿನಾದ್ಯಂತ ನಡೆಯುತ್ತಿರುವ ವಿದ್ಯಮಾನವಾಗಿದೆ. ಇದಕ್ಕೆ ಮೂಲಕಾರಣವಾಗಿ ವಲಸೆ ಎಂಬ ಜಾಗತಿಕ ಸಮಸ್ಯೆಯೂ ಇದೆ. ಈ ಅನ್ಯಗೊಳಿಸುವ ಕ್ರಿಯೆ ಕೌಟುಂಬಿಕ ನೆಲೆಯಿಂದ ಹಿಡಿದು ಧರ್ಮ, ದೇಶ, ಜಾತಿ, ವರ್ಣ, ಭಾಷೆ, ಪ್ರಾದೇಶಿಕತೆ ಎಲ್ಲ ನೆಲೆಗಳಲ್ಲಿಯೂ ನಡೆಯುವಂಥದ್ದು. ಮನುಷ್ಯನ ಮನಸ್ಸನ್ನು ಒಳಗೊಳಗೇ ವಿಘಟಿಸುವಂಥದ್ದು. ಕ್ರೌರ್ಯಕ್ಕೆ, ಹಿಂಸೆಗೆ ಬೀಜವನ್ನು ಬಿತ್ತುವಂಥದ್ದು. ವಲಸಿಗರೇ ಕಟ್ಟಿದ ದೇಶವಾದ ಅಮೆರಿಕದಲ್ಲಿ ನಡೆಯುವ ಈ ಕಥನ ಮನುಷ್ಯನ ಮನಸ್ಸಿನೊಳಗೇ ಹುದುಗಿರುವ ಕ್ರೌರ್ಯದ ನಾನಾ ಅವತಾರಗಳನ್ನೂ ತುಂಬ ಸೂಕ್ಷ್ಮವಾಗಿ ಹೇಳುತ್ತದೆ.

ಎಲ್ಲಿಯೂ ಅತಿ ಎನಿಸದ ನಿರೂಪಣೆ, ಹದಮಿತವಾದ ಮಾತು, ಅನಾಥಭಾವವನ್ನೂ ಕಣ್ಣಲ್ಲೇ ವ್ಯಕ್ತಪಡಿಸುವ ಶಕ್ತಿಶಾಲಿ ನಟನೆ ಎಲ್ಲವೂ ಈ ಕಿರುಚಿತ್ರವನ್ನು ಮತ್ತೆ ಮತ್ತೆ ನೋಡುವಂತೆ ಮಾಡುತ್ತವೆ.

**ಹೆಸರು:** ಅಮೆರಿಕನೈಸ್ಡ್ (ಇಂಗ್ಲಿಷ್)
**ನಿರ್ದೇಶನ:** ಎರಿಕಾ ಎಂಗ್
**ನಿರ್ಮಾಣ:** ಸಿಮ್ರನ್ ಮಹಲ್
**ಛಾಯಾಗ್ರಹಣ:** ಡ್ರೀವ್ ಡೇನಿಯಲ್
**ಸಂಕಲನ:** ಬೊವ್ವೆ ಯೂ
**ತಾರಾಗಣ:** ಟೆರ್ರಿ ಹೂ, ಅಂಬರ್ ಗ್ಯಾಸ್ಟನ್, ಶರಾರ್ ಅಲಿ, ಹೆಲನ್ ಒಂಗ್

■ **ಗೌರಿ**

ಈ ಕಿರುಚಿತ್ರ ವೀಕ್ಷಣೆಗೆ shorturl.at/dFZ79 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.